ಕರ್ನಾಟಕ ನಿಧಿ ನಿಕ್ಷೇಪ ಅಧಿನಿಯಮಂ

೬೫೯. ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಅಥಣಿ) ಮಾನ್ಯ ಕಂದಾಯ ಹಾಗೂ ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ಟ್ರಜರ್ ಟ್ರೋವ್ ಆಕ್ಟ್ ಪ್ರಕಾರ ಕಳೆದ ೫ ವರ್ಷಗಳಿಂದ ಸರ್ಕಾರಕ್ಕೆ ವಹಿಸಿ ಕೊಂಡ ಗುಪ್ತನಿಧಿಗಳ ಸಂಖ್ಯೆ ಎಷ್ಟು,

ಆ) ಬೆಂಗಳೂರು, ಕೋಲಾರ ಮತ್ತು ಬೆಳಗಾಂ ಜಿಲ್ಲೆಗಳಿಂದ ವರದಿಯಾದ ಅಂತಹ ಪ್ರಕರಣಗಳ ಸಂಖ್ಯೆ ಎಷ್ಟು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮಂತ್ರಿಗಳು).—

ಅ) ೮೭೩೩.

(ಆ) ೧. ಬೆಂಗಳೂರು ... ಇಲ್ಲ
೨. ಕೋಲಾರ ... ಆರು
೩. ಬೆಳಗಾಂ ... ಆರು

೨ಳನೇ ಪಟ್ಟಿಯಿಂದ ಮುಂದೂಡಲಾದ ಪ್ರಶ್ನೆ

ಸದಸ್ಯರಾದ ಸಿ. ಕಣ್ಣನ್ ಅವರು ಹಾಜರಿರಲಿಲ್ಲ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಿಗೆ ಉತ್ತರವನ್ನು ಸಭೆಯ ಮುಂದಿಡಲಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಸಹಕಾರಿ ಸಂಘ ಸಂಸ್ಥೆಗಳು

೧೮೫೧. ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ).—ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಷ್ಟು ಸಹಕಾರ ಸಂಘಗಳ ಸಂಸ್ಥೆಗಳಿವೆ,

ಆ) ೧೯೮೩-೮೪, ೧೯೮೪-೮೫ನೆಇವಲ್ಲಿ ಎಷ್ಟು ಸಹಕಾರ ಸಂಘಗಳು ಲಾಭದಲ್ಲಿವೆ, ಹಾಗೂ ಎಷ್ಟು ಸಂಘಗಳು ನಷ್ಟದಲ್ಲಿವೆ ? ಅವುಗಳ ವಿವರ ನೀಡುವುದು.

ಇ) ಈ ಸಹಕಾರಿ ಸಂಘಗಳಲ್ಲಿ ಯಾವುದರಲ್ಲಿ ಹಣದ ದುರುಪಯೋಗ ಆಗಿದೆ ಹಾಗೂ ಸರ್ಕಾರದವರು ಆ ಬಗ್ಗೆ ತೆಗೆದುಕೊಂಡ ಕ್ರಮಗಳೇನು ?

ಶ್ರೀ ಆರ್. ಎಲ್. ಜಾಲಪ್ಪ (ಸಹಕಾರ ಮಂತ್ರಿಗಳು).—

ಅ) ೩೦ನೇ ಜೂನ್ ೧೯೮೫ ಅಪೈರ್‌ಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೧೦೭೩ ಸಹಕಾರ ಸಂಘ ಸಂಸ್ಥೆಗಳಿವೆ, ಈ ಪೈಕಿ ೩೮೬ ಸಂಘಗಳು ಸ್ಥಗಿತಗೊಂಡಿದ್ದು. ೧೧೨ ಸಂಘಗಳು ಸಮಾಪನ ಹಂತದಲ್ಲಿವೆ.

ಆ)

	೧೯೮೩-೮೪	೧೯೮೪-೮೫
ಲಾಭದಲ್ಲಿರುವ ಸಹಕಾರ ಸಂಘಗಳು	೩೬೮	೪೦೦
ನಷ್ಟದಲ್ಲಿರುವ ಸಹಕಾರಿ ಸಂಘಗಳು.	೧೭೮	೧೭೫

ಇ) ೯೭ ಸಹಕಾರ ಸಂಘಗಳಲ್ಲಿ ೧೦೮ ಹಣ ದುರುಪಯೋಗದ ಪ್ರಕರಣಗಳು ಬೆಳಕಿಗೆ ಬಂದಿವೆ ಈ ಪೈಕಿ ೮೧ ಪ್ರಕರಣಗಳಲ್ಲಿ ಸಿವಿಲ್ ಮೊಕದ್ದಮೆ ಹಾಗೂ ೬೬ ಪ್ರಕರಣಗಳಲ್ಲಿ ಕ್ರಿಮಿನಲ್ ಮೊಕದ್ದಮೆ ಹೂಡಲಾಗಿದೆ. ಉಳಿದ ಪ್ರಕರಣಗಳಲ್ಲಿ ಕ್ರಮ ಜರುಗಿಸಲಾಗುತ್ತಿದೆ.